ಉಡುಪಿ ಜಿಲ್ಲೆ ಮದ್ಯ ಮಾರಾಟಗಾರರ ಸಂಘ

2870 (3837) ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಮದ್ಯ ಮಾರಾಟಗಾರರ ಸಂಘವು ಸ್ಥಾಪಿಸಲ್ಪಟ್ಟಿರುವುದು ನಿಜವೇ? ಈ ಮದ್ಯೆ ಮಾರಾಟಗಾರರ ಸಂಘವು ತನ್ನ ಸದಸ್ಯ ಮದ್ಯದಂಗಡಿಗಳಿಂದ ಮಾಸಿಕ ಶುಲ್ಕ ರೂಪದಲ್ಲಿ ತಿಂಗಳೊಂದಕ್ಕೆ ರೂ. 9.00ಲಕ್ಷಕ್ಕೂ ಮೇಲ್ಪಟ್ಟು ಹಣ ಸಂಗ್ರಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :-

ಅ) ಹೌದು

ಈ ಸಂಘದ ಚಟುವಟಿಕೆಗಳ ಬಗ್ಗೆ ದೂರು ಬಂದಿದೆ. ಇದು ಯಾವುದೇ ಅಬಕಾರಿ ಕಾಯಿದೆ ಅಡಿ ನೋಂದಾವಣೆಯಾಗಿಲ್ಲ. ಇದು ಕೇವಲ ಕರ್ನಾಟಕ ನೋಂದಾವಣೆ ಕಾಯಿದೆ 1960 ರ ಪ್ರಕಾರ ನೋದಾಯಿಸಿದ ಸಂಘವಾದ್ದರಿಂದ ಸಂಬಂಧಪಟ್ಟ ಕಂದಾಯ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳಲು ಕಳುಹಿಸಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ : ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕ	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
1.	ಕರ್ನಾಟಕ ಸೌಹಾರ್ದ ಸಹಕಾರಿ ವಿದೇಯಕ 1997.	28-3-2000	ರಾಷ್ಟ್ರಪತಿ
2.	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ 2000	31-3-2000	ರಾಜ್ಯಪಾಲರು
3.	ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ 2000	31-3-2000	ರಾಜ್ಯಪಾಲರು

4.	ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ 2000	20-4-2000	ರಾಜ್ಯಪಾಲರು
5.	ಕರ್ನಾಟಕ ಪಂಚಾಯತ್ ರಾಜ್ (ಎರಡನೇಯ ತಿದ್ದುಪಡಿ) ವಿಧೇಯಕ 2000	25-4-2000	ರಾಜ್ಯಪಾಲರು
6.	ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ ವಿಧೇಯಕ 2000	27-4-2000	ರಾಜ್ಯಪಾಲರು
7.	ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2000	27-4-2000	ರಾಜ್ಯಪಾಲರು

ಅಧ್ಯಕ್ಷರು : ಮಂಡಿಸಲಾಯಿತು

4. ವರದಿಯನ್ನೊಪಿಸುವುದು

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ ಸಮಿತಿಯ ಅಧ್ಯಕ್ಷನಾದ ಅಧೀನ ಶಾಸನ ರಚನಾ ಸಮಿತಿಯ 26ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ಸಮಿತಿಯ ಅಧ್ಯಕ್ಷನಾದ ಹಕ್ಕುಬಾಧ್ಯತೆ ಸಮಿತಿಯ ಮೊದಲನೆ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನೊಪ್ಪಿಸಲಾಯಿತು.

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ,

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8(3)ನೇ ಪ್ರಕರಣದ ಮೇರೆಗೆ;

1. ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ : 28-01-2000ದಂದು ಹೊರಡಿಸಿರುವ ಡಿಪಿಎಆರ್: 5: ಎಸ್ ಎಂಆರ್: 98ನೇ ಸಂಖ್ಯೆಯ ಅಧಿಸೂಚನೆ;

2. ಕರ್ನಾಟಕ ನಾಗರೀಕ ಸೇವೆಗಳು (ಅಬ್ಸಾರ್ವೇಷನ್ ಆಫ್ ಟೆಂಪೊರರಿ ಕಾಪಿಯಿನ್ಟ್ ಇನ್ ಡಿಪಾರ್ಟ್‌ಮೆಂಟ್ ಆಫ್ ರೆವಿನ್ಯೂ) (ಕರ್ನಾಟಕ ಅಪಿಲೇಟ್ ಟ್ರಿಬ್ಯೂನಲ್) (ವಿಶೇಷ) ನಿಯಮಗಳು 1999 ಅನ್ನು ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ : 10-05-2000 ದಂದು ಹೊರಡಿಸಲಾದ ಡಿಪಿಎಆರ್: 25: ಎಸ್ ಆರ್ ಇ: 98ನೇ ಸಂಖ್ಯೆಯ ಅಧಿಸೂಚನೆ;